ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	461 (521)
ಮಾನ್ಯ ಸದಸ್ಯರ ಹೆಸರು	ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	**16/12/2021**
ಉತ್ತರಿಸುವವರು	**ಮಾನ್ಯ ಕಾರ್ಮಿಕ ಸಚಿವರು**

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಾರ್ಮಿಕ ಇಲಾಖೆ ವ್ಯಾಪ್ತಿಯಲ್ಲಿ ಬರುವ ಉದ್ಯಮಗಳಾವುವು; ಇವುಗಳನ್ನು ಯಾವ ರೀತಿಯಲ್ಲಿ ವರ್ಗೀಕರಿಸಲಾಗಿದೆ; (ಜಿಲ್ಲಾವಾರು ವಿವರವಾದ ಮಾಹಿತಿ ನೀಡುವುದು)	ಕಾರ್ಮಿಕ ಕಾಯ್ದೆಗಳನ್ನು ಅನುಷ್ಠಾನಗೊಳಿಸುವುದು ಕಾರ್ಮಿಕ ಇಲಾಖೆಯ ಪ್ರಮುಖ ಕರ್ತವ್ಯವಾಗಿರುತ್ತದೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳಿಗೆ ಒಳಪಡುವ ಸರ್ಕಾರಿ ಸಂಸ್ಥೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಉದ್ಯಮಗಳು ಹಾಗೂ ಸಂಸ್ಥೆಗಳು ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಎಲ್ಲಾ ರೀತಿಯ ಕಾರ್ಖಾನೆಗಳು, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ಪ್ಲಾಂಟೇಷನ್‌ಗಳು, ಮೋಟಾರು ವಾಹನ ಸಂಸ್ಥೆಗಳು, ಕಟ್ಟಡ ನಿರ್ಮಾಣ ಸಂಸ್ಥೆಗಳು, ಬೀಡಿ ಮತ್ತು ಸಿಗಾರ್ ಉದ್ದಿಮೆ ಹಾಗೂ ಇತರೆ ಉದ್ದಿಮೆಗಳು ಬರುತ್ತವೆ. ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ಪ್ಲಾಂಟೇಷನ್‌ಗಳು, ಕಟ್ಟಡ ನಿರ್ಮಾಣ ಸಂಸ್ಥೆಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. ಮೋಟಾರು ವಾಹನ ಸಂಸ್ಥೆಗಳು, ಬೀಡಿ ಮತ್ತು ಸಿಗಾರ್ ಉದ್ದಿಮೆಗಳ ಇಲಾಖೆಯ ವಿಭಾಗವಾರು ಮಾಹಿತಿ ಲಭ್ಯವಿದ್ದು, ಸದರಿ ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ.
ಆ)	ಕಾರ್ಮಿಕರು ಎಂದರೆ ಯಾರು; ಕಾರ್ಮಿಕರಲ್ಲಿ ಎಷ್ಟು ವಿಧ; ಸಂಘಟಿತ ವಲಯ ಮತ್ತು ಅಸಂಘಟಿತ ವಲಯ ಎಂದರೇನು; ಇದರ ವ್ಯಾಪ್ತಿಯಲ್ಲಿ ಬರುವ ಉದ್ಯಮಗಳು ಯಾವುವು; (ವಿವರವಾದ ಮಾಹಿತಿ ನೀಡುವುದು)	**'ಕಾರ್ಮಿಕ'** ಎಂಬ ಪದದ ಅರ್ಥಕ್ಕೆ ಸಂಬಂಧಿಸಿದಂತೆ ವಿವಿಧ ಕಾರ್ಮಿಕ ಕಾಯ್ದೆಗಳಲ್ಲಿ **'ಕಾರ್ಮಿಕ'** ಎಂಬ ಪದದ ವ್ಯಾಖ್ಯಾನದಲ್ಲಿ ವ್ಯತ್ಯಾಸವಿರುತ್ತದೆ. ಕಾರ್ಮಿಕರಲ್ಲಿ ಪ್ರಧಾನವಾಗಿ ಸಂಘಟಿತ ಮತ್ತು ಅಸಂಘಟಿತ ಎರಡು ವಲಯಗಳಿದ್ದು, ಈ ಎರಡು ವಲಯಗಳೂ ಸೇರಿದಂತೆ ಕಾರ್ಮಿಕರಲ್ಲಿ ಅತಿಕುಶಲ, ಕುಶಲ, ಅರೆಕುಶಲ, ಹಾಗೂ ಅಕುಶಲ ಎಂಬ ವರ್ಗೀಕರಣ ಮಾಡಲಾಗಿರುತ್ತದೆ. ಸಂಘಟಿತ ಮತ್ತು ಅಸಂಘಟಿತ ವಲಯದ ವ್ಯಾಖ್ಯಾನ ಹಾಗೂ ಈ ವಲಯದಲ್ಲಿ ಬರುವ ಉದ್ಯಮಗಳ ಕುರಿತ ಮಾಹಿತಿ ಈ ಕೆಳ ಕಂಡಂತಿದೆ. **ಸಂಘಟಿತ ವಲಯ** ಸಂಘಟಿತ ವಲಯವು ಸಾಮಾಜಿಕ ಭದ್ರತಾ ಕಾಯ್ದೆಗಳಾದ ಪಿ.ಎಫ್ ಕಾಯ್ದೆ, ಇ.ಎಸ್.ಐ ಕಾಯ್ದೆ ಹಾಗೂ ಕನಿಷ್ಠ ವೇತನ ಕಾಯ್ದೆ, ಬೋನಸ್ ಪಾವತಿ ಕಾಯ್ದೆ, ಉಪಧನ ಪಾವತಿ ಕಾಯ್ದೆ ಇತ್ಯಾದಿ ಕಾರ್ಮಿಕ ಕಾಯ್ದೆಗಳ ವ್ಯಾಪ್ತಿಗೆ ಬರುವ ಕಾರ್ಮಿಕರನ್ನು ಹೊಂದಿದ ಸಂಸ್ಥೆಗಳನ್ನು ಒಳಗೊಳ್ಳುತ್ತದೆ.

		ಅಸಂಘಟಿತ ವಲಯ ಕೇಂದ್ರ ಸರ್ಕಾರದ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008ರ ಕಲಂ 2(ಎಲ್)ರನ್ವಯ "ಅಸಂಘಟಿತ ವಲಯ" ಎಂದರೆ, ವ್ಯಕ್ತಿಗಳ ಅಥವಾ ಸ್ವಯಂ ನಿಯೋಜಿತ ಕೆಲಸಗಾರರ ಒಡೆತನದಲ್ಲಿರುವ ಹಾಗೂ ಉತ್ಪಾದನೆಯಲ್ಲಿ ಅಥವಾ ಸರಕುಗಳ ಮಾರಾಟದಲ್ಲಿ ನಿರತವಾಗಿರುವ ಅಥವಾ ಇತರ ಯಾವುದೇ ಬಗೆಯ ಸೇವೆಯನ್ನು ಒದಗಿಸುತ್ತಿರುವ ಮತ್ತು ಉದ್ಯಮವು ಕೆಲಸಗಾರರನ್ನು ನಿಯೋಜಿಸಿಕೊಂಡಿದ್ದರೆ, ಅಂಥ ಕೆಲಸಗಾರರ ಸಂಖ್ಯೆಯು 10 ಕ್ಕಿಂತ ಕಡಿಮೆ ಇರುವ ಒಂದು ಉದ್ದಿಮೆ. ಸದರಿ ಕಾಯ್ದೆಯ ಕಲಂ 2(ಎಮ್)ರನ್ವಯ "ಅಸಂಘಟಿತ ಕೆಲಸಗಾರ" ಎಂದರೆ, ಗೃಹ ಆಧಾರಿತ ಕೆಲಸಗಾರ, ಸ್ವಯಂ ನಿಯೋಜಿತ ಕೆಲಸಗಾರ ಅಥವಾ ಅಸಂಘಟಿತ ವಲಯದ ಒಬ್ಬ ಮಜೂರಿ ಕೆಲಸಗಾರ ಮತ್ತು ಈ ಅಧಿನಿಯಮದ ಅನುಸೂಚಿ– **II** ರಲ್ಲಿ ನಮೂದಿಸಿದ ಯಾವುದೇ ಅಧಿನಿಯಮಗಳಿಗೆ ಒಳಪಟ್ಟಿರದ ಸಂಘಟಿತ ವಲಯದಲ್ಲಿನ ಕೆಲಸಗಾರನನ್ನು ಒಳಗೊಳ್ಳುತ್ತದೆ ಮತ್ತು ಕಲಂ 2(ಎನ್)ರನ್ವಯ "ಮಜೂರಿ ಕೆಲಸಗಾರ" ಎಂದರೆ, ಒಬ್ಬನೇ ನಿಯೋಜಕನಿಗಾಗಿಯಾಗಲಿ ಅಥವಾ ಒಬ್ಬ ಅಥವಾ ಹೆಚ್ಚು ನಿಯೋಜಕರಿಗಾಗಿಯಾಗಲಿ, ನಗದು ರೂಪದಲ್ಲಾಗಲಿ ಅಥವಾ ವಸ್ತು ರೂಪದಲ್ಲಾಗಲಿ ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಮಾಸಿಕ ಮಜೂರಿ ಮೊಬಲಗಿನ ಮೇಲೆ, ಒಬ್ಬ ಗೃಹ ಆಧಾರಿತ ಕೆಲಸಗಾರನಾಗಿಯಾಗಲಿ ಅಥವಾ ಒಬ್ಬ ತಾತ್ಕಾಲಿಕ ಅಥವಾ ಸಾಂದರ್ಭಿಕ ಕೆಲಸಗಾರನಾಗಿಯಾಗಲಿ, ಅಥವಾ ಒಬ್ಬ ವಲಸೆ ಕೆಲಸಗಾರನಾಗಿಯಾಗಲಿ, ಅಥವಾ ಮನೆ ಕೆಲಸದವರೂ ಒಳಗೊಂಡಂತೆ, ಕುಟುಂಬದವರಿಂದ ನಿಯೋಜಿತರಾದ ಕೆಲಸಗಾರರಾಗಲಿ, ಕೆಲಸದ ಸ್ಥಳ ಯಾವುದೇ ಇದ್ದರೂ, ಅಸಂಘಟಿತ ವಲಯದಲ್ಲಿ ಪರಿಶ್ರಮ ಧನದ ಸಂದಾಯದ ಮೇಲೆ, ಒಬ್ಬ ನಿಯೋಜಕನಿಂದ ನೇರವಾಗಿ ಅಥವಾ ಯಾರೇ ಗುತ್ತಿಗೆದಾರನ ಮೂಲಕ ನಿಯೋಜಿತನಾದ ವ್ಯಕ್ತಿ. ಈ ಹಿಂದೆ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವತಿಯಿಂದ 43 ಅಸಂಘಟಿತ ವರ್ಗಗಳನ್ನು ಗುರುತಿಸಿರುತ್ತದೆ. ಸದರಿ ಪ್ರತಿಯನ್ನು **ಅನುಬಂಧ–3** ರಲ್ಲಿ ಒದಗಿಸಿದೆ. ಪ್ರಸ್ತುತ ಕೇಂದ್ರ ಸರ್ಕಾರದ ಇ–ಶ್ರಮ್ ಪೋರ್ಟಲ್‌ರನ್ವಯ 379 ಅಸಂಘಟಿತ ವರ್ಗಗಳನ್ನು ಗುರುತಿಸಿರುತ್ತದೆ. ವಿವರವನ್ನು **ಅನುಬಂಧ–3 ಅ** ರಲ್ಲಿ ನೀಡಲಾಗಿದೆ.
ಇ)	ಅಂಬೇಡ್ಕರ್ ಸಹಾಯ ಹಸ್ತ ಯೋಜನೆ ಎಂದರೇನು; ಇದನ್ನು ಯಾವಾಗ ಆರಂಭಿಸಲಾಯಿತು; ಪ್ರಸ್ತುತ ಯೋಜನೆಯು ಜಾರಿಯಲ್ಲಿದೆಯೇ; (ವಿವರವಾದ ಮಾಹಿತಿ ನೀಡುವುದು)	**"ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ"** ಎಂಬ ಶೀರ್ಷಿಕೆಯಡಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗಳು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳನ್ನು ಒಗ್ಗೂಡಿಸಿ ಒದಗಿಸಲು ರೂಪಿಸಿದ ಯೋಜನೆಯಾಗಿರುತ್ತದೆ. ಈ ಯೋಜನೆಯು 2017–18ನೇ ಆಯವ್ಯಯದಲ್ಲಿ ಘೋಷಣೆಯಾಗಿದ್ದು, ಪ್ರಸ್ತುತ ಜಾರಿಯಲ್ಲಿರುತ್ತದೆ.

		ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೀಡುವ ಸೌಲಭ್ಯದ ವಿವರವನ್ನು **ಅನುಬಂಧ-4** ರಲ್ಲಿ ಒದಗಿಸಿದೆ. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವತಿಯಿಂದ ಸದರಿ ಯೋಜನೆಯಡಿ ಪ್ರಸ್ತುತ 11 ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್‌ಕಾರ್ಡ್ ನೀಡಲಾಗುತ್ತಿದ್ದು, ಸದರಿ ಯೋಜನೆ ಜಾರಿಯಲ್ಲಿರುತ್ತದೆ.
ಈ)	ಕಾರ್ಮಿಕ ಇಲಾಖೆಯಲ್ಲಿರುವ ಕಾರ್ಮಿಕ ನಿಧಿಯನ್ನು ಯಾವ ಯಾವ ಮೂಲಗಳಿಂದ ಸಂಗ್ರಹಿಸಲಾಗಿದೆ; ಹಾಲಿ ಲಭ್ಯವಿರುವ ಕಾರ್ಮಿಕ ನಿಧಿ ಎಷ್ಟು;	**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ** ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996ರಡಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಯನ್ನು ನಡೆಸುತ್ತಿರುವ ಮಾಲೀಕರು/ನಿಯೋಜಕರು ನಿರ್ಮಾಣ ವೆಚ್ಚದ ಮೇಲೆ ಶೇ.1 ರಷ್ಟು ಸುಂಕವನ್ನು ಪಾವತಿಸಬೇಕಾಗಿರುತ್ತದೆ. ಈ ಮೊತ್ತವನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಹಾಗೂ ಕರ್ನಾಟಕ ನಿಯಮಗಳು, 2006 ರಡಿ ರಚಿಸಲಾಗಿರುವ ಈ ಮಂಡಳಿಯ ಸುಂಕ ನಿಧಿಗೆ ಜಮಾ ಮಾಡಲಾಗುತ್ತದೆ. ಪ್ರಸ್ತುತ ಮಂಡಳಿಯ ಸುಂಕ ನಿಧಿಯಲ್ಲಿ ರೂ.7,548.88 ಕೋಟಿ ಮೊತ್ತವು ಲಭ್ಯವಿರುತ್ತದೆ. **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ** ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ರೂ.20:40 ರ ಅನುಪಾತದಲ್ಲಿ ವಂತಿಗೆ ಪಾವತಿಸುವ ಕಾರ್ಖಾನೆಗಳು, ಪ್ಲಾಂಟೇಷನ್‌ಗಳು, ಮೋಟಾರು ಸಂಸ್ಥೆಗಳು ಹಾಗೂ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ 50 ಕ್ಕಿಂತ ಹೆಚ್ಚು ಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಮಂಡಳಿಗೆ ವಂತಿಗೆ ಪಾವತಿಸುತ್ತವೆ. ಮಂಡಳಿಯಲ್ಲಿ ಪ್ರಸ್ತುತ ಒಟ್ಟು ಮೊತ್ತ ರೂ.121-00 ಕೋಟಿ ಕಾರ್ಮಿಕ ಕಲ್ಯಾಣ ನಿಧಿ ಇರುತ್ತದೆ.
ಉ)	ಸದರಿ ಕಾರ್ಮಿಕ ನಿಧಿಯನ್ನು ಯಾವ ಯಾವ ಕಾರ್ಯಕ್ರಮಗಳಿಗೆ ಮಾತ್ರ ವಿನಿಯೋಗಿಸಬಹುದಾಗಿದೆ; ಇದರ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಮುಖ್ಯಾಂಶಗಳೇನು?	**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ** ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ರಡಿ ಕಲಂ 22 ರಲ್ಲಿ ನಿರೂಪಿಸಿರುವ ನಿರ್ದಿಷ್ಟ ಉದ್ದೇಶಗಳಿಗಾಗಿ ಈ ನಿಧಿಯಲ್ಲಿರುವ ಮೊತ್ತವನ್ನು ವಿನಿಯೋಗಿಸಬಹುದಾಗಿದೆ. ಸದರಿ ಕಾಯ್ದೆಯ ಕಲಂ 22 ಕ್ಕೆ ಅನುಗುಣವಾಗಿ ಮಂಡಳಿ ರೂಪಿಸಿರುವ ಯೋಜನೆಗಳ ವಿವರವನ್ನು **ಅನುಬಂಧ-4** ರಲ್ಲಿ ಒದಗಿಸಿದೆ. ಈ ಸುಂಕ ನಿಧಿಯನ್ನು ವಿನಿಯೋಗಿಸುವ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ. 318 /2006 ರಲ್ಲಿ ನೀಡಿರುವ ತೀರ್ಪಿನ ಅನ್ವಯ ಮಂಡಳಿಯ ಸುಂಕ ನಿಧಿಯಲ್ಲಿ ಸಂಗ್ರಹವಾಗಿರುವ ಮೊತ್ತವನ್ನು ಕಾಯ್ದೆಯ ಕಲಂ 22 ರಲ್ಲಿ ನಿರೂಪಿಸಿರುವ ನಿರ್ದಿಷ್ಟ ಉದ್ದೇಶಗಳಿಗೆ ಮಾತ್ರ ವಿನಿಯೋಗಿಸಲು ಅವಕಾಶವಿರುತ್ತದೆ.

		ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗೆ ರೂ.20:40 ರ ಅನುಪಾತದಲ್ಲಿ ವಂತಿಗೆ ಪಾವತಿಸುವ ಸಂಘಟಿತ ಕಾರ್ಮಿಕರಿಗೆ ಮಂಡಳಿಯು ಈ ಕೆಳಕಂಡ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಿದೆ. 1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ 2) ಕಾರ್ಮಿಕರಿಗೆ ವೈದ್ಯಕೀಯ ನೆರವು 3) ಕಾರ್ಮಿಕರಿಗೆ ಅಪಘಾತ ಧನ ಸಹಾಯ 4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ 5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ 6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ 7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ

ಕಾಇ 531 ಎಲ್‌ಇಟಿ 2021

(*ಅರಬೈಲ್ ಶಿವರಾಂ ಹೆಬ್ಬಾರ್*)
ಕಾರ್ಮಿಕ ಸಚಿವರು

ಅನುಬಂಧ-1

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ ಶ್ರೀಕಂಠೇಗೌಡ ಇವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 461 (521)

ಕ್ರಮ ಸಂಖ್ಯೆ	ಜಿಲ್ಲೆ	ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಸಂಖ್ಯೆ	ಪ್ಲಾಂಟೇಷನ್‌ಗಳ ಸಂಖ್ಯೆ	ಕಟ್ಟಡ ನಿರ್ಮಾಣ ಸಂಸ್ಥೆಗಳ ಸಂಖ್ಯೆ
1	2	3	4	5
1	ಬೆಂಗಳೂರು ನಗರ	3,72,028		2,683
2	ರಾಮನಗರ	4,390		44
3	ತುಮಕೂರು	12,780		72
4	ಚಿಕ್ಕಬಳ್ಳಾಪುರ	5,424		62
5	ಕೋಲಾರ	7,473		137
6	ಚಾಮರಾಜನಗರ	2,676		52
7	ಮಂಡ್ಯ	6,018		58
8	ಮೈಸೂರು	21,070		240
9	ಬಿಜಾಪುರ	9,852		79
10	ಬೆಳಗಾವಿ	27,371		726
11	ಬಾಗಲಕೋಟೆ	12,223		49
12	ಗದಗ	6,175		20
13	ಧಾರವಾಡ	20,267		94
14	ಹಾವೇರಿ	6,094		11
15	ಉತ್ತರ ಕನ್ನಡ	17,105		33
16	ಬಳ್ಳಾರಿ	22,990		102
17	ಚಿತ್ರದುರ್ಗ	11,843		88
18	ದಾವಣಗೆರೆ	16,910		111
19	ಬೀದರ್	7,953		13
20	ಕಲಬುರಗಿ	11,054		62
21	ಕೊಪ್ಪಳ	10,166		37
22	ರಾಯಚೂರು	9,539		110
23	ಯಾದಗಿರಿ	4,608		2
24	ಚಿಕ್ಕಮಗಳೂರು	4,964	343	21
25	ಹಾಸನ	12,230	235	78
26	ಕೊಡಗು	3,266	508	16
27	ದಕ್ಷಿಣ ಕನ್ನಡ	15,507	107	161
28	ಶಿವಮೊಗ್ಗ	16,150		101
29	ಉಡುಪಿ	7,239		1,165
30	ಬೆಂಗಳೂರು ಗ್ರಾಮಾಂತರ	9,888		-

ಅನುಬಂಧ-2

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ ಶ್ರೀಕಂಠೇಗೌಡ ಇವರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 461 (521)

ಕ್ರಮ ಸಂಖ್ಯೆ	ವಿಭಾಗ	ಮೋಟಾರು ವಾಹನ ಸಂಸ್ಥೆಗಳ ಕಾಯ್ದೆ	ಬೀಡಿ ಮತ್ತು ಸಿಗಾರ್ ಉದ್ದಿಮೆಗಳ ಸಂಖ್ಯೆ
1	2	3	4
1	ಬೆಂಗಳೂರು ವಿಭಾಗ-1	209	15
2	ಬೆಂಗಳೂರು ವಿಭಾಗ-2	33	20
3	ಬೆಂಗಳೂರು ವಿಭಾಗ-3	84	13
4	ಬೆಂಗಳೂರು ವಿಭಾಗ-4	2	41
5	ಮೈಸೂರು ವಿಭಾಗ	193	87
6	ಮಂಗಳೂರು ವಿಭಾಗ	5308	328
7	ಚಿಕ್ಕಮಗಳೂರು ವಿಭಾಗ	-	24
8	ಬೆಳಗಾವಿ ವಿಭಾಗ	3	9
9	ದಾರವಾಡ ವಿಭಾಗ	185	22
10	ಬಳ್ಳಾರಿ ವಿಭಾಗ	218	14
11	ಕಲ್ಬುರ್ಗಿ ವಿಭಾಗ	1	2
	ಒಟ್ಟು	**6236**	**575**

ಅನುಬಂಧ-3

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶ್ರೀ ಕಂಠೇಗೌಡ
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 461 (521)
ಸರ್ಕಾರ ಗುರುತಿಸಿರುವ 43 ಅಸಂಘಟಿತ ವರ್ಗದ ಕಾರ್ಮಿಕರ ಪಟ್ಟಿ

1. ದರ್ಜಿಗಳು
2. ದೋಬಿಗಳು
3. ಹಮಾಲಿಗಳು
4. ಹೋಟೆಲ್ ಕಾರ್ಮಿಕರು
5. ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ ಖಾಸಗಿ ಬಸ್, ಲಾರಿ ಚಾಲಕರು ಹಾಗೂ ನಿರ್ವಾಹಕರು
6. ಆಟೋಮೊಬೈಲ್ ವರ್ಕ್‌ಶಾಪ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಮತ್ತು
7. ಗೃಹ ಕಾರ್ಮಿಕರು
8. ಕೃಷಿ/ತೋಟಗಾರಿಕೆ/ಹೈನುಗಾರಿಕೆ ಕೆಲಸಗಳಲ್ಲಿ ತೊಡಗಿರುವ ಕೂಲಿ ಕಾರ್ಮಿಕರು
9. ನಾರಿನ ಉದ್ದಿಮೆಯಲ್ಲಿ ತೊಡಗಿರುವ ಕೂಲಿ ಕಾರ್ಮಿಕರು
10. ಮನೆಗಳಲ್ಲಿ ನೇಯ್ಗೆ ಕೆಲಸ ಮಾಡುವ ನೇಕಾರರು
11. ಮೀನುಗಾರರು
12. ಕುಂಬಾರರು
13. ಚಮ್ಮಾರರು
14. ಕ್ಷೌರಿಕರು
15. ಕಸಾಯಿ ಖಾನೆ ಕಾರ್ಮಿಕರು
16. ಕಮ್ಮಾರರು
17. ಚಿನಿವಾರರು/ಅಕ್ಕಸಾಲಿಗರು
18. ಮನೆಗಳಲ್ಲಿ ಬೀಡಿ ಕಟ್ಟುವವರು
19. ಮನೆಗಳಲ್ಲಿ ಅಗರಬತ್ತಿ ತಯಾರಿಸುವ ಕಾರ್ಮಿಕರು
20. ಶಿಲ್ಪಕಾರರು/ ಹಸ್ತ ಕುಶಲ ಕಾರ್ಮಿಕರು
21. ಚಿತ್ರ ಬಿಡಿಸುವವರು
22. ಬಿದಿರಿನ ವಸ್ತುಗಳನ್ನು ತಯಾರು ಮಾಡುವವರು
23. ಖಾದ್ಯ ತೈಲ/ಮನೆಯಲ್ಲಿ ಆಹಾರ ವಸ್ತುಗಳ ಸಂಸ್ಕರಣೆ ಕೆಲಸದಲ್ಲಿ ತೊಡಗಿರುವವರು.
24. ಟಿಂಬರ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
25. ರೇಷ್ಮೆ ಕಾರ್ಮಿಕರು
26. ಕಾಟನ್ ಜಿನ್ನಿಂಗ್ ಮತ್ತು ಪ್ರೊಸೆಸಿಂಗ್ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
27. ಮುದ್ರಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
28. ಕಲ್ಲು ಒಡೆಯುವ ಕಾರ್ಮಿಕರು
29. ಚರ್ಮ ಹದ ಮಾಡುವ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
30. ಎಲ್ಲಾ ವಿಧದ ಮಿಲ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರು
31. ಬೀದಿ ಬದಿಯ ಮಾರಾಟಗಾರರು
32. ಚಾಲಕರು/ನಿರ್ವಾಹಕರು/ಸಹಾಯಕರು/ ಕ್ಲೀನರ್‌ಗಳು/ ಗಾಡಿ ಎಳೆಯುವವರು/ ರಿಕ್ಷಾ ವಾಲಾಗಳು/ ಟಾಂಗಾವಾಲಾಗಳು.
33. ಎಲ್ಲಾ ಬಗೆಯ ರಿಪೇರಿ ಕೆಲಸ ಮತ್ತು ತ್ಯಾಜ್ಯ ವಿಲೇವಾರಿ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು
34. ಚಿಂದಿ ಆಯುವವರು

35. ಅಡಿಗೆ ಕೆಲಸಗಾರರು/ಕಲ್ಯಾಣ ಮಂಟಪಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವವರು/ಮಧ್ಯಾಹ್ನದ ಬಿಸಿ ಊಟದ ಕಾರ್ಮಿಕರು ಮತ್ತು ಸಹಾಯಕರು
36. ಸಫಾಯಿ ಕರ್ಮಚಾರಿಗಳು
37. ಕಛೇರಿಗಳಲ್ಲಿ ಶುಚಿ ಕೆಲಸದಲ್ಲಿ ತೊಡಗಿರುವ ಗುತ್ತಿಗೆ ಕಾರ್ಮಿಕರು
38. ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಭದ್ರತಾ ಸಿಬ್ಬಂದಿ/ವಾಚ್‌ಮೆನ್‌ಗಳು
39. ಪೋರ್ಟರ್
40. ಪ್ರವಾಸಿ ಗೈಡ್‌ಗಳು
41. ಮಂಡಕ್ಕಿ ಭಟ್ಟಿ ಕಾರ್ಮಿಕರು
42. ಛಾಯಾವೃತ್ತಿ ಕಾರ್ಮಿಕರು
43. ಇತರೆ ವರ್ಗ (ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 2(ಟ) ಹಾಗೂ ಕಲಂ 2 (l) ರ ವ್ಯಾಖ್ಯಾನಕ್ಕೆ ಒಳಪಡುವ ಅಸಂಘಟಿತ ವರ್ಗದ ಎಲ್ಲಾ ಕಾರ್ಮಿಕರು)

ಅನುಬಂಧ-3 'ಅ'

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ ಶ್ರೀಕಂಠೇಗೌಡ ಇವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 461 (521)

Sl.No	Sector Name	Job Role / Occupation	ಉದ್ಯೋಗದ ವಿಧ/ ವೃತ್ತಿ
1	Agriculture	Cultivator - General	ಕೃಷಿಕ-ಸಾಮಾನ್ಯ
2	Agriculture	Cultivator - Crop	ಕೃಷಿಕ-ಬೆಳೆ
3	Agriculture	Cultivator - Cotton	ಕೃಷಿಕ-ಹತ್ತಿ
4	Agriculture	Cultivator - Fruit (Horticulturist)	ಕೃಷಿಕ-ಹಣ್ಣು (ತೋಟಗಾರಿಕೆ)
5	Agriculture	Cultivator - Vegetables	ಕೃಷಿಕ-ತರಕಾರಿ
6	Agriculture	Toddy Tapper	ಸೇಂದಿ ಇಳಿಸುವವರು
7	Agriculture	Tea Plantation Worker	ಚಹಾ ತೋಟದ ಕೆಲಸಗಾರರು
8	Agriculture	Coffee Plantation Worker	ಕಾಫೀ ತೋಟದ ಕೆಲಸಗಾರರು
9	Agriculture	Bamboo Grower	ಬಿದುರು ಬೆಳೆಗಾರರು
10	Glass Makers, Cutters, Grinders and Finishers	Bead Maker (Glass)	ಮಣಿ ತಯಾರಕರು (ಗಾಜು)
11	Glass Makers, Cutters, Grinders and Finishers	Optical Worker	ಕನ್ನಡಕ ತಯಾರಿ ಕಾರ್ಮಿಕರು
12	Glass Makers, Cutters, Grinders and Finishers	Glass Bangles Maker	ಗಾಜಿನ ಬಳೆ ತಯಾರಕರು
13	Electrical Mechanics and Fitters	Iron & Steel - Fitter Electrical Assembly	ಕಬ್ಬಿಣ & ಉಕ್ಕು - ವಿದ್ಯುತ್ ಯಂತ್ರ ಜೋಡಣೆಗಾರರು
14	Metal Finishing, Plating and Coating Machine Operators	Picker	ಆರಿಸುವವರು
15	Chemical Products Plant and Machine Operators	Box Making Machine Operator (Match)	ಪೆಟ್ಟಿಗೆ ತಯಾರಿ ಯಂತ್ರ ನಿರ್ವಹಣೆಗಾರ (ಬೆಂಕಿ ಪೆಟ್ಟಿಗೆ)
16	Chemical Products Plant and Machine Operators	Box Filling Machine Operator (Match)	ಪೆಟ್ಟಿಗೆ ತುಂಬಿಸುವ ಯಂತ್ರ ನಿರ್ವಹಣೆಗಾರರು (ಬೆಂಕಿ ಪೆಟ್ಟಿಗೆ)
17	Chemical Products Plant and Machine Operators	Rubber Worker	ರಬ್ಬರ್ ಕಾರ್ಮಿಕರು
18	Chemical Products Plant and Machine Operators	Agarbati Maker	ಅಗರಬತ್ತಿ ತಯಾರಕರು
19	Chemical Products Plant and Machine Operators	Pencil Maker	ಪೆನ್ಸಿಲ್ ತಯಾರಕರು
20	Plastic Products Machine Operators	Moulder, Hand (Plastic)	ಅಚ್ಚು ಹಿಡಿಕೆ (ಪ್ಲಾಸ್ಟಿಕ್) ತಯಾರಕರು
21	Paper Products Machine Operators	Cardboard Box Maker	ರಟ್ಟಿನ ಪೆಟ್ಟಿಗೆ ತಯಾರಕರು
22	Paper Products Machine Operators	Envelope Maker - Machine	ಲಕೋಟೆ ತಯಾರಕರು- ಯಂತ್ರ
23	Paper Products Machine Operators	Bag Maker - Machine	ಬ್ಯಾಗ್ ತಯಾರಕರು- ಯಂತ್ರ
24	Paper Products Machine Operators	Flower Maker - Paper	ಹೂ ತಯಾರಕರು - ಕಾಗದ
25	Manufacturing Labourers Not Elsewhere Classified	Salt Reclamation Worker	ಉಪ್ಪು ಸುಧಾರಣ ಕಾರ್ಮಿಕ

26	Manufacturing Labourers Not Elsewhere Classified	Accessory Fitter	ಪರಿಕರಗಳ ಜೋಡಣೆ
27	House Builders	Builders, Traditional Materials, Other	ಕಟ್ಟಡಗಾರರು, ಸಾಂಪ್ರದಾಯಿಕ ವಸ್ತುಗಳು, ಇತರೆ
28	Bricklayers and Related Workers	Stone Mason	ಕಲ್ಲು ಒಡೆಯುವವರು
29	Bricklayers and Related Workers	Brick Layerer, Construction	ಇಟ್ಟಿಗೆ ತಯಾರಕರು, ನಿರ್ಮಾಣಕಾರರು
30	Stonemasons, Stone Cutters, Splitters and Carvers	Stone Carver/ Stone Cutter/ Stone Dresser/ Stone Polisher	ಕಲ್ಲು ಶಿಲ್ಪಿಗಳು/ ಕಲ್ಲು ಕತ್ತರಿಸುವವರು/ ಕಲ್ಲು ವಿನ್ಯಾಸಕಾರರು/ ಕಲ್ಲು ಪಾಲಿಶ್ ಮಾಡುವವರು
31	Concrete Placers, Concrete Finishers and Related Workers	Concrete Placers, Concrete Finishers and Related Workers, Other	ಕಾಂಕ್ರಿಟ್ ಹಾಕುವವರು/ ಕಾಂಕ್ರಿಟ್ ಪೂರ್ಣಗೊಳಿಸುವವರು ಮತ್ತು ಇತರೆ ಸಂಬಂಧಿತ ಕಾರ್ಮಿಕರು
32	Carpenters and Joiners	Carpenter - General	ಬಡಗಿ– ಸಾಮಾನ್ಯ
33	Carpenters and Joiners	Shuttering Carpenter	ಶಟ್ಟರಿಂಗ್ ಬಡಗಿ
34	Building Frame and Related Traders	White Washer	ಸುಣ್ಣ ಬಳಿಯುವವರು
35	Roofers	Roofers, Other	ಛಾವಣಿಗಳು ಮತ್ತು ಇತರೆ
36	Floor Layers and Tile Setters	Tile Setter	ಟೈಲ್ಸ್ ಹಾಕುವವರು
37	Plasterers	Plasterer	ಪ್ಲಾಸ್ಟರಿಂಗ್ ಮಾಡುವವರು
38	Insulation Workers	Acoustical Insulator	ಶ್ರವಣದ ಅವಕಾಹಕ ಹಾಕುವರು
39	Glaziers	Picture Framer	ಚಿತ್ರ ಚೌಕಟ್ಟು ರಚನೆಕಾರರು
40	Plumbers and Pipe Fitters	Plumber/ Sanitation Worker	ಕೊಳಾಯಿಗಾರ/ ನೈರ್ಮಲ್ಯ ಕೆಲಸಗಾರರು
41	Air-Conditioning and Refrigeration Mechanics	Mechanic, Refrigeration and Air-Conditioning	ಮೆಕಾನಿಕ್– ಶೀತಗಾರ ಮತ್ತು ವಾಯು ನಿಯಂತ್ರಕಗಳು
42	Painters and Related Workers	Assistant Painter & Decorator	ಪೆಂಟಿಂಗ್ ಸಹಾಯಕ ಮತ್ತು ಅಲಂಕಾರಿಕರು
43	Spray Painters and Varnishers	Painter - General	ಪೈಂಟರ್– ಸಾಮಾನ್ಯ
44	Structural Metal Preparers and Erectors	Fitter - Construction	ಜೋಡಿಸುವವ– ನಿರ್ಮಾಣ ಕಾರ್ಯ
45	Electrical Mechanics and Fitters	Maintenance Assistant Helper	ನಿರ್ವಹಣ ಸಹಾಯಕರು– ಕಟ್ಟಡ
46	Sheet Metal Workers	Sheet Metal Worker, General/ Sheet Metal Worker ? Hand Tools and Manually Operated Machines	ಲೋಹದ ಶೀಟ್ ಕಾರ್ಮಿಕ– ಸಾಮಾನ್ಯ/ಲೋಹದ ಶೀಟ್ ಕಾರ್ಮಿಕ ? ಕೈ ಉಪಕರಣಗಳು ಮತ್ತು ಹಸ್ತ ಚಾಲಿತ ಯಂತ್ರಗಳು.
47	Riggers and Cable Splicers	Rigger - Rigging of Heavy Material	ರಿಗ್ಗರ್– ಭಾರವಾದ ವಸ್ತುಗಳನ್ನು ಎತ್ತುವ ಯಂತ್ರಗಳ ನಿರ್ವಹಣೆಗಾರರು
48	Blacksmiths, Hammersmith and Forging Press Workers	Blacksmith/ Ironsmith	ಕಮ್ಮಾರ/ ಕಬ್ಬಿಣ ಕೆಲಸಗಾರ
49	Tool Makers and Related Workers	Die Maker	ಡೈ ತಯಾರಕ
50	Tool Makers and Related Workers	Locksmith	ಕೀಲಿ ತಯಾರಕ

51	Metal Working Machine Tool Setters and Operators	CNC Operator - Turning	ಸಿ.ಎನ್.ಸಿ ನಿರ್ವಹಣೆಗಾರ– ಟರ್ನಿಂಗ್
52	Metal Polishers, Wheel Grinders and Tool Sharpeners	Grinder, General	ಗ್ರೈಂಡರ್– ಸಾಮಾನ್ಯ
53	Metal Polishers, Wheel Grinders and Tool Sharpeners	Thread Grinder	ತ್ರೆಡ್ ಗ್ರೈಂಡರ್
54	Metal Polishers, Wheel Grinders and Tool Sharpeners	Polisher	ಪಾಲಿಷರ್
55	Agricultural and Industrial Machinery Mechanics and Repairers	Fitter - General	ಜೋಡಣೆಗಾರ– ಸಾಮಾನ್ಯ
56	Agricultural and Industrial Machinery Mechanics and Repairers	Iron & Steel - Machinist	ಕಬ್ಬಿಣ ಮತ್ತು ಉಕ್ಕು – ಯಂತ್ರಕಾರ
57	Agricultural and Industrial Machinery Mechanics and Repairers	Fitter Levelling - Alignment & Balancing	ಜೋಡಣೆ ಸಮಗೊಳಿಸುವಿಕೆ–ಜೋಡಣೆ ಮತ್ತು ಸಮತೋಲನ
58	Agricultural and Industrial Machinery Mechanics and Repairers	Bearing Maintenance	ಬೇರಿಂಗ್ ನಿರ್ವಹಣೆ
59	Agricultural and Industrial Machinery Mechanics and Repairers	Mechanic - Earth Moving Machinery	ಮೆಕಾನಿಕ್– ಭೂಮಿ ಚಲನಾ ಯಂತ್ರಗಳು
60	Agricultural and Industrial Machinery Mechanics and Repairers	Mechanic, Repairman (Domestic Appliances)	ಮೆಕಾನಿಕ್, ದುರಸ್ತಿಗಾರ (ಗೃಹೋಪಯೋಗಿ ಉಪಕರಣಗಳು)
61	Precision Instrument Makers and Repairers	Watch Repairer	ಕೈ ಗಡಿಯಾರ ರಿಪೇರಿ ಮಾಡುವವರು
62	Precision Instrument Makers and Repairers	Iron & Steel - Fitter Instrumentaion	ಕಬ್ಬಿಣ ಮತ್ತು ಉಕ್ಕು – ವಾದ್ಯ ಜೋಡಣೆಗಾರು
63	Jewellery and Precision Metal Workers	Jewellery Polisher	ಆಭರಣ ಪಾಲಿಷ್ ಮಾಡುವವರು
64	Jewellery and Precision Metal Workers	Component Maker	ಆಭರಣ ಘಟಕ ತಯಾರಕರು
65	Jewellery and Precision Metal Workers	Gold Foil Maker	ಚಿನ್ನದ ತಗಡು ತಯಾರಕರು
66	Jewellery and Precision Metal Workers	Goldsmith	ಅಕ್ಕಸಾಲಿಗ
67	Jewellery and Precision Metal Workers	Polisher and Cleaner	ಪಾಲಿಷ್ ಮತ್ತು ಸ್ವಚ್ಛಗೊಳಿಸುವವರು
68	Jewellery and Precision Metal Workers	Wax Setter (Basic)	ಮೇಣ ಸ್ಥಾಪಕರು (ಮೂಲ)
69	Jewellery and Precision Metal Workers	Gemstone Rough Cutter	ರತ್ನ ಕತ್ತರಿಸುವವರು

70	Jewellery and Precision Metal Workers	Gem Grinder - Hand	ರತ್ನದ ಗ್ರೈಂಡರ್- ಕೈ
71	Jewellery and Precision Metal Workers	Gem Polisher - Hand	ರತ್ನ ಪಾಲಿಷ್ ಮಾಡುವವರು- ಕೈ
72	Jewellery and Precision Metal Workers	Diamond Assorter (E)	ವಜ್ರ ವಿಂಗಡಣೆಗಾರರು (ಇ)
73	Jewellery and Precision Metal Workers	Bottom Polisher	ಆಭರಣ ತಳ ಪಾಲಿಷ್ ಮಾಡುವವರು
74	Potters and Related Workers	Clay Maker (Pottery)	ಮಣ್ಣಿನ ವಸ್ತು ತಯಾರಕರು (ಕುಂಬಾರಿಕೆ)
75	Glass Makers, Cutters, Grinders and Finishers	Blower - Glass	ಊದುವವನು- ಗಾಜು
76	Glass Makers, Cutters, Grinders and Finishers	Mouldman (Glass)	ಅಚ್ಚುಗಾರ (ಗಾಜು)
77	Motor Vehicle Mechanics and Repairers	Mechanic - Automobile	ಮೆಕಾನಿಕ್- ಆಟೋ ಮೊಬೈಲ್
78	Motor Vehicle Mechanics and Repairers	Maintenance Technician - Service Workshop	ತಾಂತ್ರಿಕ ನಿರ್ವಹಣೆಗಾರರು- ಸೇವಾ ಕಾರ್ಯಗಾರ
79	Motor Vehicle Mechanics and Repairers	Mechanic or Fitter	ಮೋಟಾರು ಮೆಕಾನಿಕ್ ಅಥವಾ ಜೋಡಣೆಗಾರ
80	Motor Vehicle Mechanics and Repairers	Auto Service Technician (Two and Three Wheeler)	ಆಟೋ ಸೇವಾ ತಾಂತ್ರಿಕರು (2 ಮತ್ತು 3 ಚಕ್ರ ವಾಹನ)
81	Motorcycle Drivers	Auto Rickshaw Driver	ಆಟೋ ರಿಕ್ಷಾ ಚಾಲಕರು
82	Car, Taxi and Van Drivers	Driver - Car	ಕಾರು ಚಾಲಕ
83	Car, Taxi and Van Drivers	Taxi Driver	ಟ್ಯಾಕ್ಸಿ ಚಾಲಕ
84	Car, Taxi and Van Drivers	Ambulance Driver	ಆಂಬುಲೆನ್ಸ್ ಚಾಲಕ
85	Bus and Tram Drivers	Driver - Bus	ಬಸ್ ಚಾಲಕ
86	Bus and Tram Drivers	Driver - Fire Brigade Vehicles	ಅಗ್ನಿಶಾಮಕ ದಳ ವಾಹನ ಚಾಲಕ
87	Heavy Truck and Lorry Drivers	Driver - Truck	ಟ್ರಕ್ ಚಾಲಕ
88	Mobile Farm and Forestry Plant Operators	Tractor Driver	ಟ್ರಾಕ್ಟರ್ ಚಾಲಕ
89	Lifting Truck Operators	Lift Truck Operator, Other	ಭಾರ ಎತ್ತುವ ಟ್ರಕ್ ನಿರ್ವಾಹಕರು, ಇತರೆ
90	Vehicle Cleaners	Washer	ವಾಹನ ತೊಳೆಯುವವರು
91	Vehicle Cleaners	Driving Assistant/ Cleaner/ Helper	ಚಾಲನ ಸಹಾಯಕರು/ ಕ್ಲೀನರ್‌ಗಳು/ ಸಹಾಯಕರು
92	Hand and Pedal Vehicle Drivers (Cycle Rickshaw and Cart Puller)	Driver - Cycle Rikshaw	ಸೈಕಲ್ ರಿಕ್ಷಾ ಚಾಲಕರು
93	Drivers of Animal-Drawn Vehicles and Machinery	Horse Carriage Driver	ಕುದುರೆ ಬಂಡಿ ಚಾಲಕರು

94	Drivers of Animal-Drawn Vehicles and Machinery (bulluck cart, horse carriage etc.)	Cart Driver	ಗಾಡಿ ಚಾಲಕರು
95	Drivers of Animal-Drawn Vehicles and Machinery (bulluck cart, horse carriage etc.)	Supervisor, Animal-Drawn and Manually Operated Transport Equipment	ಮೇಲ್ವಿಚಾರಕ, ಪ್ರಾಣಿಗಳು ಎಳೆಯುವ ಮತ್ತು ದೈಹಿಕವಾಗಿ ಚಾಲು ಮಾಡುವ ಸಾರಿಗೆ ಉಪಕರಣಗಳು
96	Masseur	Physiotherapist/ Assistant	ಭೌತ ಚಿಕಿತ್ಸಕಾರರು/ ಸಹಾಯಕರು
97	Hairdressers, Barber	Hair Dresser (Ladies)	ಕೇಶ ವಿನ್ಯಾಸಕಿ (ಮಹಿಳೆ)
98	Hairdressers, Barber	Barber	ಕ್ಷೌರಿಕ
99	Beauticians and Related Workers	Beautician	ಸೌಂದರ್ಯ ವರ್ದಕರು
100	Beauticians and Related Workers	Pedicurist and Manicurist	ಪಾದೋಪಚಾರ ಮತ್ತು ಹಸ್ತಾಲಂಕಾರ
101	Beauticians and Related Workers	Make-up Man	ಅಲಂಕಾರ ಮಾಡುವವ
102	Beauticians and Related Workers	Dresser - Stage and Studio	ವಿನ್ಯಾಸಕ – ವೇದಿಕೆ ಮತ್ತು ಸ್ಟುಡೀಯೋ
103	Beauticians and Related Workers	Wigman	ವಿಗ್ ಮ್ಯಾನ್
104	Beauticians and Related Workers	Bath Attendant	ಸ್ನಾನದ ಪರಿಚಾರಕರು
105	Pawnbrokers and Moneylenders	Pawnbrokers and Moneylenders, Other	ಗಿರವಿದಾರ ಮತ್ತು ಲೇವಾದೇವಿದಾರರು, ಇತರೆ
106	Debt Collectors and Related Workers	Debt Collectors and Related Workers, Other	ಸಾಲ ಸಂಗ್ರಹಣೆಗಾರ ಮತ್ತು ಇತರೆ ಸಂಬಂಧಿತ ಕೆಲಸಗಾರರು, ಇತರೆ
107	Draughtpersons	Draughtsman - Mechanical	ನಕ್ಷೆಗಾರ– ಮೆಕಾನಿಕಲ್
108	Metal Production Process Controllers	Mixerman	ಮಿಶ್ರಣಗಾರರು
109	Metal Moulders and Core Makers	Core Maker, Moulding (Hand)	ಕೋರ್ ಮೇಕರ್ ಮತ್ತು ಮೌಲ್ಡಿಂಗ್ (ಕೈ)
110	Welders and Flame Cutters	Welder	ವೆಲ್ಡರ್
111	Welders and Flame Cutters	Iron & Steel Plasma Cutter: Manual	ಕಬ್ಬಿಣ ಮತ್ತು ಉಕ್ಕಿನ ಪ್ಲಾಸ್ಮಾ ಕತ್ತರಿಸುವವರು : ದೈಹಿಕವಾಗಿ
112	Welders and Flame Cutters	Welding Helper	ವೆಲ್ಡಿಂಗ ಸಹಾಯಕರು
113	Gardeners and Nursery Growers	Green House Fitter	ಹಸಿರು ಮನೆ ಜೋಡಣೆಗಾರರು
114	Gardeners and Nursery Growers	Floriculturist	ಹೂ ಬೆಳೆಗಾರರು
115	Livestock and Dairy Producers	Dairy Farmer	ಹೈನುಗಾರ
116	Livestock and Dairy Producers	Herdsman	ಕುರಿಗಾಹಿ

117	Livestock and Dairy Producers	Dairy Worker	ಡೈರಿ ಕೆಲಸಗಾರ
118	Livestock and Dairy Producers	Stableman	ಕುದುರೆ ಸಾಕುವವನು
119	Livestock and Dairy Producers	Mahout	ಮಾವುತ
120	Poultry Producers	Farmer - Poultry Breeding	ರೈತ- ಕೋಳಿ ಸಾಕಾಣಿಕೆ
121	Poultry Producers	Broiler Farm Worker	ಬ್ರಾಯ್‌ಲರ್ ಫಾರ್ಮ ಕಾರ್ಮಿಕ
122	Apiarists (Bee Keepers) and Sericulturists	Bee Farmer	ಜೇನು ಸಾಕಾಣಿಕೆಕಾರರು
123	Apiarists (Bee Keepers) and Sericulturists	Sericulturist	ರೇಷ್ಮೆಕೆಲಸಗಾರರು
124	Forestry and Related Workers	Forest Guard	ಅರಣ್ಯ ಕಾಯುವವರು
125	Forestry and Related Workers	Gatherer - Lac	ಸಂಗ್ರಾಹಕ- ಲ್ಯಾಕ್
126	Forestry and Related Workers	Gatherer - Medicinal Herbs	ಸಂಗ್ರಾಹಕ- ಔಷದಿ ಗಿಡಮೂಲಿಕೆ
127	Forestry and Related Workers	Gatherer - Firewood	ಸಂಗ್ರಾಹಕ-ಕಟ್ಟಿಗೆ
128	Forestry and Related Workers	Wood Cutter	ಕಟ್ಟಿಗೆ/ಮರ ಕತ್ತರಿಸುವವರು
129	Fishery and Aquaculture Labourers	Fisherman	ಮೀನುಗಾರರು
130	Mobile Farm and Forestry Plant Operators	Tractor Operator	ಟ್ರಾಕ್ಟರ್ ನಿರ್ವಾಹಕರು
131	Mobile Farm and Forestry Plant Operators	Farm Machines Operator	ತೋಟ ಯಂತ್ರ ನಿರ್ವಾಹಕರು
132	Crop Farm Labourers	Ploughman	ಉಳುವವರು
133	Crop Farm Labourers	Labourer - Agricultural	ಕಾರ್ಮಿಕ- ಕೃಷಿ
134	Forestry Labourers	Labourer - Plantation	ಕಾರ್ಮಿಕ- ನೆಡುತೋಪು
135	Tailors, Dressmakers, Furriers and Hatters	Tailor - General	ಟೈಲರ್- ಸಾಮಾನ್ಯ
136	Tailors, Dressmakers, Furriers and Hatters	Hat Maker - General	ಟೋಪಿ ತಯಾರಕ- ಸಾಮಾನ್ಯ
137	Tailors, Dressmakers, Furriers and Hatters	Wig Maker	ವಿಗ್ ತಯಾರಕರು
138	Tailors, Dressmakers, Furriers and Hatters	Tailor - Fur	ಟೈಲರ್- ತುಪ್ಪಳ
139	Tailors, Dressmakers, Furriers and Hatters	Pattern Maker - Fur	ಮಾದರಿ ತಯಾರಕರು- ತುಪ್ಪಳ
140	Tailors, Dressmakers, Furriers and Hatters	Cutter - Fur	ಕತ್ತರಿಸುವವರು- ತುಪ್ಪಳ
141	Garment and Related Pattern Makers and Cutters	Cutter - Hand (Textile Product)	ಕತ್ತರಿಸುವವರು- ಕೈ (ಬಟ್ಟೆ ಉತ್ಪಾದನೆಗಳು)
142	Garment and Related Pattern Makers and Cutters	Cutter - Garment (Leather)	ಕತ್ತರಿಸುವವರು- ಉಡುಪು (ಚರ್ಮ)

143	Garment and Related Pattern Makers and Cutters	Cutter - Tent	ಕತ್ತರಿಸುವವರು- ಟೆಂಟ್
144	Sewing, Embroiderers and Related Workers	Sewer - Hand	ಹೊಲಿಗೆಗಾರರು- ಕೈ
145	Sewing, Embroiderers and Related Workers	Hand Embroiderer	ಕೈ ಕಸೂತಿಗಾರರು
146	Sewing, Embroiderers and Related Workers	Umbrella Maker	ಕೊಡೆ ತಯಾರಕರು
147	Sewing, Embroiderers and Related Workers	Tailor, Tent (Machine)	ಟೈಲರ್, ಟೆಂಟ್ (ಯಂತ್ರ)
148	Upholsterers and Related Workers	Upholsterer - Furniture	ಸಜ್ಜುಗಾರರು- ಪೀಠೋಪಕರಣ
149	Upholsterers and Related Workers	Upholsterer - Vehicle	ಸಜ್ಜುಗಾರರು- ವಾಹನ
150	Upholsterers and Related Workers	Cushion Maker	ಕುಶನ್ ತಯಾರಕರು
151	Product Graders and Testers (Excluding Food and Beverages)	In Line Checker	ಇನ್ ಲೈನ್ ಚೆಕ್ಕರ್
152	Sewing Machine Operators	Sewing Machine Operator	ಒಲಿಗೆ ಯಂತ್ರ ನಿರ್ವಾಹಕರು
153	Transport Conductors	Bus Conductor	ಬಸ್ ನಿರ್ವಾಹಕರು
154	Driving Instructors	Commercial Vehicle Driver Trainer	ವಾಣಿಜ್ಯ ವಾಹನ ಚಾಲಕರ ತರಬೇತುದಾರರು
155	Spray Painters and Varnishers	Painter	ಪೈಂಟರ್- ಆಟೋಮೊಬೈಲ್
156	Electrical Line Installers and Repairers	Lineman - Light and Power	ಲೈನ್‌ಮೆನ್- ಬೆಳಕು ಮತ್ತು ವಿದ್ಯುತ್
157	Cabinet Makers and Related Workers	Furniture Maker - Wood	ಪೀಠೋಪಕರಣ ತಯಾರಕರು- ಕಟ್ಟಿಗೆ
158	Cabinet Makers and Related Workers	Sports Goods Maker - Wood	ಕ್ರೀಡಾ ಸರಕು ತಯಾರಕರು'- ಕಟ್ಟಿಗೆ
159	Cabinet Makers and Related Workers	Wood Polisher	ಕಟ್ಟಿಗೆ ಪಾಲಿಷ್ ಮಾಡುವವರು
160	Cement, Stone and Other Mineral Products Machine Operators	Polishing Machine Operator (Mosaic)	ಪಾಲಿಷ್ ಯಂತ್ರ ನಿರ್ವಹಾಕರು (ಮೊಸಾಯಿಕ್)
161	Cement, Stone and Other Mineral Products Machine Operators	Concrete Mixer Operator	ಕಾಂಕ್ರಿಟ್ ಮಿಶ್ರಣ ಯಂತ್ರ ನಿರ್ವಾಹಕರು
162	Earth Moving and Related Plant Operators	Bulldozer Operator	ಬುಲ್ಡೋಜರ್ ನಿರ್ವಾಹಕರು
163	Earth Moving and Related Plant Operators	Loader Operator	ಲೋಡರ್ ನಿರ್ವಾಹಕರು
164	Earth Moving and Related Plant Operators	Excavator Operator	ಅಗೆಯುವ ಯಂತ್ರ ನಿರ್ವಾಹಕರು
165	Building Construction Workers	Bar Bender & Fixer	ಬಾರ್ ಬೆಂಡರ್ ಮತು ಫಿಕ್ಸರ್

166	Building Construction Workers	Helper Mason	ಕಟ್ಟದ ನಿರ್ಮಾಣ ಸಹಾಯಕ
167	Building Construction Workers	Helper Electrician	ವಿದ್ಯುತ್ ಸಹಾಯಕ
168	Domestic Cooks	Cook, Domestic	ಅಡುಗೆ ಮತ್ತು ಗೃಹ ಕಾರ್ಮಿಕ
169	Domestic Cooks	Kitchen Porter	ಅಡಿಗೆ ಕೆಲಸಗಾರ
170	Domestic Cooks	Pantry man	ಪ್ಯಾಂಟ್ರಿ ಮ್ಯಾನ್
171	Domestic Cleaners and Helpers	Domestic and Related Helpers, Cleaners and Launderers, Other	ಗೃಹ ಮತ್ತು ಇತರೆ ಸಂಬಂಧಿತ ಸಹಾಯಕರು, ಸ್ವಚ್ಛತಾ ಕಾರ್ಮಿಕರು ಮತ್ತು ಬಟ್ಟೆ ತೊಳೆಯುವವರು, ಇತರೆ
172	Electrical Engineering Technicians	LED Light Repair Technician	ಎಲ್.ಇ.ಡಿ. ಬಲ್ಬ್ ರಿಪೇರಿ ತಂತ್ರಜ್ಞರು
173	Broadcasting and Audiovisual Technicians/ Cine Workers	Broadcasting and Audiovisual Technicians/ Cine Workers/ Script Writer/ Content Developer/ Micro jobber/ Cameraman/Sound/ Film Editor/ Cinematographer/ and Social Media related	ಪ್ರಸಾರ ಮತ್ತು ಆಡೀಯೊ ವಿಶ್ಯುಯಲ್ ತಂತ್ರಜ್ನರು/ ಸಿನಿಮಾ ಕಾರ್ಮಿಕರು/ ಸ್ಕ್ರಿಪ್ಟ್ ಬರೆಯುವವರು/ ಮಾಹಿತಿ ಸಿದ್ಧಪಡಿಸುವವರು/ ಮೈಕ್ರೊ ಜಾಬರ್/ ಕ್ಯಾಮರ್ ಮೆನ್/ ಶಬ್ದ/ ಸಂಕಲನಕಾರರು/ ಸಿನಿಮಾಟೋಗ್ರಾಫರ್/ ಮತ್ತು ಸಾಮಾಜಿಕ ಮಾಧ್ಯಮ ಸಂಬಂಧಿತ
174	Telecommunication Engineering Technicians	Technician - Telecommunication	ತಂತ್ರಜ್ಞರು- ದೂರಸಂಪರ್ಕ
175	Sales Demonstrators	Customer Care Executive	ಗ್ರಾಹಕ ಸೇವಾ ಸಿಬ್ಬಂದಿ
176	Building and Related Electricians	Electrician - General	ವಿದ್ಯುತ್ ಕಾರ್ಮಿಕ- ಸಾಮಾನ್ಯ
177	Building and Related Electricians	CCTV Installation Technician	ಸಿ.ಸಿ.ಟಿ.ವಿ. ಪರಿಕರಗಳನ್ನು ಸ್ಥಾಪಿಸುವವರು
178	Building and Related Electricians	Electrician (Mines)	ಇಲೇಕ್ಟ್ರೀಷಿಯನ್ (ಗಣಿ)
179	Electrical Mechanics and Fitters	Mechanical Fitter	ಮೆಕಾನಿಕ್ ಜೋಡಣೆಗಾರ
180	Electronic Mechanics and Servicers (home appliances etc)	Electronic Mechanic	ಇಲೆಕ್ಟ್ರಾನಿಕ್ ಮೆಕಾನಿಕ್
181	Electronic Mechanics and Servicers (home appliances etc)	Field Technician - Other Home Appliances	ಕ್ಷೇತ್ರ ತಂತ್ರಜ್ನರು- ಇತರೆ ಗೃಹೋಪಯೋಗಿ ಪರಿಕರಗಳು
182	Electronic Mechanics and Servicers (home appliances etc)	TV Repair Technician	ಟಿ.ವಿ ರಿಪೇರಿ ತಂತ್ರಜ್ಞರು
183	Electronic Mechanics and Servicers (home appliances etc)	Solar Panel Installation Technician	ಸೋಲಾರ್ ಪ್ಯಾನಲ್ ಜೋಡಿಸುವ ತಂತ್ರಜ್ಞರು
184	Information and Communications Technology Installers and Servicers (networking and surveillance workers etc)	Installation Mechanic	ಮೆಕಾನಿಕ್ ಅನುಸ್ಥಾಪನಗಾರ

185	Information and Communications Technology Installers and Servicers (networking and surveillance workers etc)	Lineman - Telephone and Telegraph	ಲೈನ್‌ಮೆನ್- 'ದೂರವಾಣಿ ಮತ್ತು ಟೇಲಿಗ್ರಾಫ್
186	Information and Communications Technology Installers and Servicers (networking and surveillance workers etc)	Set top Box Installer, Technician	ಸೆಟ್ ಟಾಪ್ ಬಾಕ್ಷ ಅನುಸ್ಥಾಪನಗಾರ. ತಂತ್ರಜ್ಞರು
187	Information and Communications Technology Installers and Servicers (networking and surveillance workers etc)	Field Technician - Computing and Peripherals	ಕ್ಷೇತ್ರ, ತಂತ್ರಜ್ಞನರು (ಕಂಪ್ಯೂಟರ್ ಮತ್ತು ಸಂಬಂಧಿತ ಉಪಕರಣಗಳು)
188	Information and Communications Technology Installers and Servicers (networking and surveillance workers etc)	Installation Technician (Computing and Peripherals)	ತಾಂತ್ರಿಕ ಅನುಸ್ಥಾಪನಗಾರ (ಕಂಪ್ಯೂಟರ್ ಮತ್ತು ಸಂಬಂಧಿತ ಉಪಕರಣಗಳು)
189	Information and Communications Technology Installers and Servicers (networking and surveillance workers etc)	Field Technician - Networking and Storage	ಕ್ಷೇತ್ರ, ತಂತ್ರಜ್ಞನರು - ನೆಟ್ ವರ್ಕಿಂಗ್ ಮತ್ತು ಸಂಗ್ರಹಣೆ
190	Information and Communications Technology Installers and Servicers (networking and surveillance workers etc)	Smartphones Repair Technician	ಸ್ಮಾರ್ಟ್ ಫೋನ್ ದುರಸ್ತಿ ತಂತ್ರಜ್ಞರು
191	Electrical and Electronic Equipment Assemblers	Assembler, Electrical Accessories	ಜೋಡಕರು, ವಿದ್ಯುತ್ ಪರಿಕರಗಳು
